2)	ವರ್ಷ	ಕೊಡಮಾಡಿದ ಹಣ
	2006–07	61 206 ಲಕ್ಷ
	2007–08	92 218 ಲಕ್ಷ

3) ಹೌದು

4) ತಾಲ್ಲೂಕಿನಲ್ಲಿ 2007 ರ ಮುಂಗಾರು ಹಂಗಾಮಿನಲ್ಲಿ ಹೈ–ಜೋಳ, ಸಜ್ಜೆ, ಗೋವಿನ ಜೋಳ, ಹೆಸರು ತೊಗರಿ, ಸೂರ್ಯಕಾಂತಿ, ಸೋಯಾ, ಅವರೆ ಹಾಗೂ ಔಡಲ ಬೀಜಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವಿತರಿಸಲಾಗುತ್ತಿದೆ

241(569) ಶ್ರೀ ಸಿದ್ದು ಸವದಿ (ಜಮಖಂಡಿ)

ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೀನುಗಾರರಿಗೆ ಮತ್ತು ಮೀನುಗಾರರ ಸಂಘಗಲಿಗೆ ನದಿಯಲ್ಲಿ ಮೀನು ಹಿಡಿಯಲು ಗುತ್ತಿಗೆ ನೀಡಲು ಇರುವ ನಿಯಮಾವಳಿಗಳಾವುವು?

ಆ) ಜಮಖಂಡಿ ತಾಲ್ಲೂಕಿನಲ್ಲಿ ಇರುವ ಅಂತಹ ಸಂಘಗಳೆಷ್ಟು ಮತ್ತು ಅವುಗಳಲ್ಲಿರುವ ಮೀನುಗರರ ಸಂಖ್ಯೆ ಎಷ್ಟು?

ಇ) ಜಮಖಂಡಿ ತಾಲ್ಲೂಕಿನಲ್ಲಿರುವ ಕೃಷ್ಣಾನದಿಯಲ್ಲಿ ಗುತ್ತಿಗೆಯನ್ನು ಮೀನುಗಾರರಲ್ಲದ ವ್ಯಕ್ತಿಗೆ ಗುತ್ತಿಗೆ ಕೊಡಲಾಗಿದೆಯೇ?

ಈ) ಈ ಗುತ್ತಿಗೆದಾರರನ್ನು ಬಡ ಮೀನುಗಾರರ ಮೀನುಗಲನ್ನು ಅತೀ ಕಡಿಮೆ ಬೆಲೆಯಲ್ಲಿ ಖರೀದಿಸಿ ನಾಲ್ಕು ಪಟ್ಟು ಹೆಚ್ಚು ಬೆಲೆಯಿಂದ ವ್ಯಾಪಾರ ವ್ಯವಹಾರ ಮಾಡುತ್ತಿದ್ದು ಇದರಿಂದ ಬಡ ಮೀನುಗಾರರಿಗೆ ಅನ್ಯಾಯವಾಗುತ್ತಿಲ್ಲವೆ?

ಊ) ಹಿಂದಿನಿಂದಲೂ ಇರುವ ಸಂಘಗಳಿಗೆ ಗುತ್ತಿಗೆ ನೀಡಲು ಇರುವ ತೊಂದರೆಗಳೇನು? ಕೊಡುತ್ತಿದ್ದರೆ ಯಾವಾಗ ಕೊಡಲಾಗುವದು?

ಶ್ರೀ ಬಿ ನಾಗರಾಜ ಶೆಟ್ಟಿ

ಅ) ಸರ್ಕಾರಿ ಆದೇಶ ಸಂಖ್ಯೆ ಪಸಂಮೀ/167/ಮೀಇಇ/2005 ದಿನಾಂಕ 28-02-2006 ರನ್ವಯ ಮೀನುಗಾರಿಕೆ ನಡೆಸುವ ಬಗ್ಗೆ ಹೊಸದಾದ ನಿಯಮಾವಳಿ ರೂಪಿಸಲಾಗಿದ್ದು ಪ್ರತಿ ಕಿ ಮೀ ಉದ್ದದ ನದಿ ಬಾಗಕ್ಕೆ ವಾರ್ಷಿಕ 150-00 ರಂತೆ ಗುತ್ತಿಗೆ ಮೊತ್ತ ನಿಗದಿಪಡಿಸಿ ಮೀನುಗಾರಿಕೆ ಸಹಕಾರ ಸಂಘಕ್ಕೆ ಗರಿಷ್ಠ 20 ಕಿಮೀ ನದಿ ಬಾಗದ ಮೀನು ಪಾಶುವಾರು ಹಕ್ಕನ್ನು 05 ವರ್ಷದ ಅವಧಿಗೆ ಪ್ರತಿವರ್ಷ ಗುತ್ತಿಗೆಯನ್ನು ನವೀಕರಿಸಿಕೊಳ್ಳುವ ನಿಬಂಧನೆಗೆ ಒಳಪಟ್ಟು ಗುತ್ತಿಗೆಗೆ ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ ಮೀನುಗಾರರಿಗೆ ವೈಯಕ್ತಿಕವಾಗಿ ನದಿಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆಗೆ ನೀಡಲು ಅವಕಾಶವಿಲ್ಲ ಆದರೆ ಗುರುತಿಸಿದ ನದಿಗಳಲ್ಲಿ ವೈಯಕ್ತಿಕವಾಗಿ ಮೀನುಗಾರರು ಮೀನು ಹಿಡಿಯಲು ತಲಾ 1,000-00 ಲೈಸೆನ್ಸ್ ಶುಲ್ವನ್ನು ಪಾವತಿಸಿ ವಾರ್ಷಿಕ ಪರವಾನಗಿ ಪಡೆದು ಮೀನು ಹಿದಿಯಬಹುದು

ಆ) ಜಮಖಂಡಿ ತಾಲ್ಲೂಕಿನಲ್ಲಿ 03 ಮೀನುಗಾರಿಕೆ ಸಹಕಾರ ಸಂಘಗಲಿವೆ ಅವುಗಳೆಂದರೆ (1) ಕಲ್ಯಾಣಕಾರಿ ಮೀನುಗಾರರ ಸಹಕಾರ ಸಂಘ ನಿ, ಜಮಖಂಡಿ ಸದಸ್ಯರ ಸಂಖ್ಯೆ 228, (2) ಬಿಕೆ ಜಂಬಗಿ ಮೀನುಗಾರರ ಸಹಕಾರ ಸಂಘ ನಿ, ಬಿಕೆ ಜಂಬಗಿ ಜಮಖಂಡಿ ಸದಸ್ಯರ ಸಂಖ್ಯೆ 356 ಮತ್ತು (3) ರಾಜೀವ್ ಗಾಂಧಿ ಮೀನುಗಾರರ ಸಹಕಾರ ಸಂಘ ನಿ, ಜಮಖಂಡಿ ಸದಸ್ಯರ ಸಂಖ್ಯೆ 279

ಇ) ಜಮಖಂಡಿ ತಾಲ್ಲೂಕಿನಲ್ಲಿರುವ ಕೃಷ್ಣಾ ನದಿಯ ಮೀನು ಪಾಶುವಾರು ಹಕ್ಕನ್ನು ಮೀನುಗಾರರಲ್ಲದ ವ್ಯಕ್ತಿಗೆ ಗುತ್ತಿಗೆಗೆ ನೀಡಿರುವುದಿಲ್ಲ ಆದರೆ, ಜಮಖಂಡಿ ತಾಲ್ಲೂಕಿನ 40 ಕಿ ಮೀ ಕೃಷ್ಣಾನದಿ ಭಾಗದ ಮೀನು ಪಾಶುವಾರು ಹಕ್ಕನ್ನು ರಾಜೀವ್‌ಗಾಂದಿ ಮೀನುಗಾರರ ಸಹಕಾರ ಸಂಘ ನಿ, ಜಮಖಂಡಿ ಇವರಿಗೆ 2004-05 ರಿಂದ 2007-07 ರವರೆಗೆ

ಹೊಸ ಗುತ್ತಿಗೆ ನಿಯಮಾವಳಿ ಜಾರಿಗೆ ಬರುವುದಕ್ಕಿಂತ ಮೊದಲೇ ಗುತ್ತಿಗೆಗೆ ನೀಡಲಾಗಿದೆ ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ ಪಸಂಮೀ/ 146/ಮೀಇಇ/2005 ದಿನಾಂಕ 18–09–2006 ರಂತೆ ಸದರಿ ಗುತ್ತಿಗೆ ಅವಧಿಯನ್ನು ಮತ್ತೆರಡು ವರ್ಷಗಳ ಅವದಿಗೆ ಅಂದರೆ 2008–09 ರ ವರೆಗೆ ದಿನಾಂಕ 30–06–2009 ರವರೆಗೆ ವಿಸ್ತರಿಸಲಾಗಿದೆ

ಈ) ಮೀನಿಗೆ ದೊರೆಯುವ ಬೆಲೆ ಕುರಿತಂತೆ ಮೀನುಗಾರಿಕೆ ಇಲಾಖೆಯು ನಿಯಂತ್ರಣ ಹೊಂದಿರುವುದಿಲ್ಲ

ಉ) ಜಮಖಂಡಿ ತಾಲ್ಲುಕಿನ 40 ಕಿ.ಮೀ ಕೃಷ್ಣಾ ನದಿ ಭಾಗದ ಮಿನು ಪಾಶುವಾರು ಹಕ್ಕನ್ನು ರಾಜೀವ್‌ಗಾಂಧಿ ಮೀನುಗಾರರ ಸಹಕಾರ ಸಂಘ ನಿ., ಜಮಖಂಡಿ ಇವರಿಗೆ ಗುತ್ತಿಗೆಗೆ ನೀಡಲಾಗಿದೆ ಈ ಅವಧಿಯ 2008–09 ರವರೆಗೆ ಅಂದರೆ ದಿನಾಂಕ 30–06–2009 ರವರೆಗೆ ಇರುತ್ತದೆ ಆ ಬಳಿಕ ಉಳಿದ ಸಂಘಗಲಿಗೆ ಗುತ್ತಿಗೆಯನ್ನು ನಿಡುವ ಕುರಿತು ಅರ್ಜಿಗಳು ಬಂದಲ್ಲಿ ಪರಿಶೀಲಿಸಲಾಗುವುದು

242(400) ಶ್ರೀ ಸೊಮಣ್ಣ ವಿ (ಬಿನ್ನಿಪೇಟೆ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಜನವರಿಯಿಂದ ಇಲ್ಲಿಯವರೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು?

ಆ) ಆ ರೀತಿ ಆತ್ಮಹತ್ಯೆಗೆ ಶರಣಾಗಲು ಕಾರಣಗಳೇನು?

ಇ) ಇಲ್ಲಿಯವರೆಗೆ ಆತ್ಮಹತ್ಯೆ ಮಾಡಿಕೊಂಡ ಎಷ್ಟು ರೈತರ ಕುಟುಂಬಗಳಿಗೆ ಎಷ್ಟು ಪರಿಹಾರ ನೀಡಲಾಗಿದೆ?

ಈ) ರೈತರ ಬೆಳೆಗೆ ಸರಿಯಾದ ಬೆಲೆ ಹಾಗೂ ಲೇವಾದೇವಿಗಾರರ ಹಿಂಸೆಯಿಂದ ರೈತರನ್ನು ಮುಕ್ತರನ್ನಾಗಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?